**ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.**

ಸಿ.ಸಿ. ನಂಬರ 12/2020

ಸಿಡಬ್ಲ್ಯೂ- 6/ಪಿಡಬ್ಲ್ಯೂ-3

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನೀಲಾ |
| ಗಂಡನ ಹೆಸರು | ಃ | ಶಶಿಧರ ಲಮಾಣಿ |
| ವಯಸ್ಸು | ಃ | 37 ವರ್ಷ |
| ವೃತ್ತಿ | ಃ | ಮನೆಕೆಲಸ |
| ವಾಸ್ತವ್ಯ | ಃ | ಕುನ್ನೂರು, ಮಾಮದಾಪುರ, ಶಿಗ್ಗಾಂವ ತಾ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 17-03-2025.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಆರೋಪಿ ನನ್ನ ಮಾವ. ನಾನು ಮತ್ತು ಆರೋಪಿ ಅಗಡಿಯಿಂದ ಮುಂಡಗೋಡಿಗೆ ಬರುತ್ತಿದ್ದೆವು. ನಾವು ಸೈಡಿಗೆ ಇದ್ದೆವು, ಅವರೇ ಬಂದು ಹಾಯಿದ್ದುತ್ತಾರೆ. ನಮಗೆ ಪ್ರಜ್ಞೆ ತಪ್ಪಿರುತ್ತದೆ. ಪ್ರಜ್ಞೆ ತಪ್ಪಿದ ನಂತರ ನನಗೆ ಏನಾಯಿತೆಂದು ನನಗೆ ತಿಳಿದಿರುವುದಿಲ್ಲ. ನಾನು ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ.

**(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.**

ದಿಃ 14-03-2019 ರಂದು ನಾನು ಮತ್ತು ಆರೋಪಿ ಅಗಡಿಯಿಂದ ಮುಂಡಗೋಡಿಗೆ ಬರುತ್ತಿದ್ದೆವು ಎಂದರೆ ಸರಿ. ಸದರಿ ದಿನದಂದು ನಾನು ಆರೋಪಿಗೆ ನಿಧಾನವಾಗಿ ವಾಹನವನ್ನು ಚಲಾಯಿಸು ಎಂದು ಹೇಳುತ್ತಾ ಇದ್ದೆನು ಎಂದರೆ ಸರಿ. ಕ್ಯಾಂಪ್ ನಂ.6 ಹತ್ತಿರ ಧರ್ಮಣ್ಣ ಇವರ ಹೋಟೇಲ್ ಎದುರು ತಲುಪಿದಾಗ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ. ಮುಂಡಗೋಡ ಕಡೆಯಿಂದ ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಆರೋಪಿಯು ಡಿಕ್ಕಿಪಡಿಸಿದ್ದರಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ. ಆಗ ರಾತ್ರಿ 10-00 ಗಂಟೆ ಆಗಿತ್ತು ಎಂದರೆ ಸಾಕ್ಷಿಯು 10-10.30 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ಮುಂಡಗೋಡ ಕಡೆಯಿಂದ ದ್ವಿಚಕ್ರ ವಾಹನ ಮೇಲಾಗಿ ಬರುತ್ತಿದ್ದ ವ್ಯಕ್ತಿ ತೀರಿಕೊಂಡ ಎಂದರೆ ಸಾಕ್ಷಿಯು ಇರಬಹುದು ನನಗೆ ಎಚ್ಚರವಿರಲಿಲ್ಲ. ಅಪಘಾತವಾದ ನಂತರ ಏನು ನಡೆಯಿತು ಎಂಬ ಎಲ್ಲಾ ವಿಷಯಗಳು ನನಗೆ ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸಾಕ್ಷಿಯು ನಾವು ನಿಧಾನವಾಗಿ ಬದಿಯಲ್ಲಿಯೇ ಇದ್ದೆವು ಎಂದು ನುಡಿಯುತ್ತಾರೆ. ನಿಧಾನವಾಗಿ

ವಾಹನವನ್ನು ಚಲಾಯಿಸುವ ವ್ಯಕ್ತಿಗೆ ನಿಧಾನವಾಗಿ ಚಲಾಯಿಸು ಎನ್ನುವ ಪ್ರಮೇಯ ಬರುವುದಿಲ್ಲ ಎಂದರೆ ಆ ಸಮಯಕ್ಕೆ ನಾನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನ್ನ ಮಾವನಾಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎ ಎನ್., ವಕೀಲರಿಂದಃ**

ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಎದುರುಗಡೆಯಿಂದ ಬರುತ್ತಿದ್ದ ವ್ಯಕ್ತಿಯಿಂದ ತಪ್ಪಿನಿಂದ ಅಪಘಾತ ಸಂಭವಿಸಿರುತ್ತದೆ ಎಂದು ನುಡಿದಿರುತ್ತೇನೆ. ಕ್ಯಾಂಪ್ ನಂ.6 ರ ಹತ್ತಿರ ತಿರುವು ಇದೆ ಎಂದರೆ ಸರಿ. ಮೃತ ವ್ಯಕ್ತಿಯು ತಿರುವಿನಲ್ಲಿ ಅತಿವೇಗವಾಗಿ ಬಂದು ಆರೋಪಿತನ ಎಡಗಡೆಗೆ ಬಂದು ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಅಪಘಾತ ಮೃತ ವ್ಯಕ್ತಿಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

**ಓ .ಹೇ.ಕೇ. ಸರಿ ಇದೆ**

**-Sd-**

**ಪ್ರ.ದ.ನ್ಯಾ.ದಂ. ಮುಂಡಗೋಡ.**